ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ**

ದೂರವಾಣಿ ಸಂಖ್ಯೆ: 0831-2467071 ಇ-ಮೇಲ್: dcfbgm@gmail.com

ಸಂಖ್ಯೆ: ಡಿ1/ಭೂಮಿ/ಎಮ್‌ಎಸ್‌ಪಿಎಲ್/ಪ.ನೆ/ಸಿಆರ್- 13894 /2018-19. ದಿನಾಂಕ: 26-12-2019.
01-01-2020

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ

ಮಾನ್ಯರೇ,

ವಿಷಯ: Request to issue NOC/Suitablity Certificate of the land to be handed over to the Forest Department as part of the Compansatory Afforstation located at 6/4, 6/5, 6/6 in Amagon Village, Jamboti Hobli, Khanapur Taluk, Belagavi Dist-Karnataka.
**Proposal No: FP/KA/WIND/38582/2019.**

ಉಲ್ಲೇಖ:
1. ಎಮ್.ಎಸ್.ಪಿ.ಎಲ್ ಲಿಮಿಟೆಡ್ ಇವರ ಮನವಿ ದಿನಾಂಕ: 05-10-2019.
2. ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅ.ಸಂ), ಬೆಂಗಳೂರುರವರ ಕಛೇರಿ ಪತ್ರ ಸಂಖ್ಯೆ: ಕೆಎಫ್‌ಡಿ/ ಹೆಚ್‌ಓಎಫ್‌ಎಫ್/ ಎ54(ಎಫ್‌ಸಿ)/1/2019-ಎಫ್‌ಸಿ ದಿನಾಂಕ: 15-05-2019.
3. ವಲಯ ಅರಣ್ಯ ಅಧಿಕಾರಿ, ಭೀಮಗಡ ಇವರ ಪತ್ರ ಸಂಖ್ಯೆ: ಭೀವಜೀವ/ ಹೆಮ್ಮಡಗಾ/ಭೂಮಿ/ಅಮಗಾಂವ/ಸಿಆರ್/2019-20, ದಿನಾಂಕ:17-12-2019
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಇವರ ಪತ್ರ ಸಂಖ್ಯೆ: ಸಅಸಂ/ಖಾಉವಿ/ಭೂಮಿ/2019-20, ದಿನಾಂಕ: 18-12-2019.

*****

ವಿಷಯಕ್ಕೆ ಸಂಬಂಧಿಸಿದಂತೆ, ಖಾನಾಪೂರ ತಾಲೂಕಿನ, ಜಾಂಬೋಟಿ ಹೋಬಳಿ, ಅಮಗಾಂವ ಗ್ರಾಮದ ಜಮೀನನ್ನು ಇಲಾಖಾ ವಶಕ್ಕೆ ಪಡೆದುಕೊಳ್ಳಲು ಎಮ್.ಎಸ್.ಪಿ.ಎಲ್ ಲಿಮಿಟೆಡ್ ಇವರು ಈ ಕೆಳಗಿನ ಯೋಜನೆಗೆ ಯೋಗ್ಯತಾ ಪ್ರಮಾಣ ಪತ್ರ (Suitablity Certificate) ಪೂರೈಸುವಂತೆ ಉಲ್ಲೇಖ-1 ರ ಪತ್ರದಲ್ಲಿ ಕೋರಿಕೊಂಡಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

| Sl.No | Project Details | CA land Sy No | Extent in Acres | Online FC Proposal No | Project area comes under division |
|---|---|---|---|---|---|
| 1 | GR Halli wind project of MSPL Limited | 6/5 | 28.94 | FP/KA/WIND/38582/2019 | DCF Chitradurga |

ಮೇಲಿನ ಸ್ಥಳವನ್ನು ವಲಯ ಅರಣ್ಯ ಅಧಿಕಾರಿ, ಭೀಮಗಡ ಇವರು ದಿನಾಂಕ: 29-11-2019 ರಂದು ಪರಿಶೀಲಿಸಿ ಉಲ್ಲೇಖ-3 ರಲ್ಲಿ ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

1. ಅಮಗಾಂವ ರಿ.ಸ.ನಂ 6/5 ನೇದ್ದರ ಜಮೀನುಗಳು ಮಾಲ್ಕಿ ಜಮೀನುಗಳಾಗಿದ್ದು ಕಂದಾಯ ಇಲಾಖೆಯ ಪಹಣಿ ಪತ್ರಿಕೆಗಳಿಂದ ತಿಳಿದು ಬರುತ್ತದೆ.
2. ಸದರಿ ಜಮೀನುಗಳ ಪೂರ್ವ ದಿಕ್ಕಿಗೆ ಕಾಯ್ದಿಟ್ಟ ಅರಣ್ಯ ಸ.ನಂ 7 ಇರುತ್ತದೆ. ಪಶ್ಚಿಮಕ್ಕೆ ಕಾಯ್ದಿಟ್ಟ ಅರಣ್ಯ ಸ.ನಂ5, ಉತ್ತರಕ್ಕೆ ಕಾಯ್ದಿಟ್ಟ ಅರಣ್ಯ ಸ.ಣಮ 7 ಮತ್ತು ದಕ್ಷಿಣಕ್ಕೆ ರಿ.ಸ.ನಂ 6/7 ಇರುತ್ತದೆ.
3. ಪ್ರಸ್ತಾಪಿತ ಕ್ಷೇತ್ರಗಳಲ್ಲಿ ಮಣ್ಣಿನ ಗುಣಧರ್ಮ ಉಸುಕು ಮಿಶ್ರಿತ ಜಂಬಿಟ್ಟಿಗೆ ಮಣ್ಣನ್ನು ಹೊಂದಿರುತ್ತದೆ.
4. ಸದರಿ ರಿ.ಸ.ನಂ ಗಳಲ್ಲಿ ದಟ್ಟವಾದ ಗಿಡಮರಗಳಿದ್ದು, ಅದರಲ್ಲಿ ಮುಖ್ಯವಾಗಿ ಅಂಜನ, ಕುಂಜನ, ಕಿಂದಳ, ಮತ್ತಿ, ನಂದಿ, ಜಾತಿಯ ಗಿಡಗಳಿದ್ದು, ಖಾಲಿ ಜಾಗೆಯಲ್ಲಿ ಹುಲ್ಲುಗಾವಲು ಇರುತ್ತದೆ. ಮತ್ತು ಕಾಜು ಜಾತಿಯ ಸಸಿಗಳನ್ನು ನೆಟ್ಟಿದ್ದು ಇರುತ್ತದೆ.

Received
DCF office Chitradurga
01/01/2020

ಕಛೇರಿ ಸಹಾಯಕರು
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಚಿತ್ರದುರ್ಗ

5. ಸದರಿ ರಿ.ಸ.ನಂ ಗಳು ಅರಣ್ಯದ ಮಧ್ಯಭಾಗದಲ್ಲಿರುವುದರಿಂದ ವನ್ಯಜೀವಿಗಳ ಆವಾಸ ಸ್ಥಾನ ಹೆಚ್ಚಿಸಿ ಅವುಗಳ ಸಂತತಿ ವೃದ್ಧಿಸಲು ಅತೀ ಹೆಚ್ಚು ಉಪಯುಕ್ತವಿರುತ್ತದೆ.
6. ಸದರಿ ರಿ.ಸ.ನಂ ಗಳಲ್ಲಿ ಔಷಧಿ ಸಸಿಗಳನ್ನು ನೆಟ್ಟು ಔಷಧಿ ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ.
7. ಸದರಿ ರಿ.ಸ.ನಂ ಗಳಲ್ಲಿ 50% ಹುಲ್ಲುಗಾವಲು ಇದ್ದು, ಇನ್ನುಳಿದ ಕ್ಷೇತ್ರಗಳಲ್ಲಿ ಜಂಗ್ಲಿ ಗಿಡಗಳು ಇರತ್ತವೆ.

ಮೇಲಿನಂತೆ ವಲಯ ಅರಣ್ಯ ಅಧಿಕಾರಿ, ಭೀಮಗಡ ಇವರ ವರದಿಯು ಸಮಂಜಸವಾಗಿದ್ದು, ಸದರಿ ಕ್ಷೇತ್ರಗಳನ್ನು ಇಲಾಖಾ ವಶಕ್ಕೆ ಪಡೆದು ಪರಿಹಾರಾತ್ಮಕ ನೆಡುತೋಪು ಬೆಳೆಸಬಹುದಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಇವರು ಉಲ್ಲೇಖ-4 ರಲ್ಲಿ ವರದಿ ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿ ಪ್ರದೇಶವನ್ನು ನಾನು ದಿನಾಂಕ: 15-11-2019 ರಂದು ಪರಿಶೀಲಿಸಲಾಗಿ ಸದರಿ ಪ್ರಸ್ತಾಪಿತ ಪ್ರದೇಶವು ಅರಣ್ಯ ಭೂಮಿಯಿಂದ ಸುತ್ತುವರೆದಿದ್ದು ಭೀಮಗಡ ವನ್ಯಜೀವಿ ವಲಯದಲ್ಲಿ ಬರುತ್ತದೆ. ಸದರಿ ಪ್ರದೇಶದಲ್ಲಿ ಹುಲಿ, ಚಿರತೆ, ಕಾಡು-ಕುರಿ, ಕಾಡು-ನಾಯಿ, ಸಾಂಬಾರ, ಕಾಡುಕೋಣ, ಕರಡಿ, ವಿವಿಧ ಜಾತಿಯ ಹಾವುಗಳು, ಕೀಟಗಳು, ಪಕ್ಷಿಗಳು, ಇತರೆ ಬೆಲೆಬಾಳುವ ವನಔಷಧಿ ಸಸ್ಯಗಳಾದ ಮ್ಯಾಪಿಯಾ, ವಾಯ್‌ವಡಂಗ, ಸಪ್ತರಂಗಿ ಹಾಗೂ ಇನ್ನಿತರೆ ಜಾತಿಯ ಔಷಧಿ ಗಿಡಗಳು ಸಿಗುತ್ತವೆ. ಹಾಗೂ ಇತರ ಪ್ರಾಣಿಗಳ ಚಲನವಲನಗಳನ್ನು ಕಂಡಿರುವುದಾಗಿ ಸಿಬ್ಬಂದಿಯವರು ತಿಳಿಸಿರುತ್ತಾರೆ. ಹಾಗೂ ಸಸ್ಯಾಹಾರಿ ಪ್ರಾಣಿಗಳಿಗೆ ಹುಲ್ಲುಗಾವಲು ಪ್ರದೇಶವು ಅವುಗಳ ವಾಸಸ್ಥಾನಕ್ಕೆ ಸೂಕ್ತವಾಗಿರುತ್ತದೆ. ಅದರಿಂದಾಗಿ ರಿ.ಸ.ನಂ ಗಳ ಪ್ರದೇಶಗಳಲ್ಲಿ ಯತೇಚ್ಛವಾಗಿ ಹುಲ್ಲು ಬೆಳೆದಿರುತ್ತದೆ. ಹಾಗೂ ಈ ರಿ.ಸ.ನಂ ಗಳ ಪ್ರದೇಶಗಳು ಅರಣ್ಯ ಪ್ರದೇಶಕ್ಕೆ ತಾಗಿಕೊಂಡಿರುವುದರಿಂದ ನಿರ್ವಹಣೆ ಸುಲಭವಾಗುತ್ತದೆ. ಹಾಗೂ ಸುತ್ತಲಿನ ಪ್ರದೇಶವು ಪ್ರಚಲಿತ ಕಾರ್ಯಯೋಜನೆ ಪ್ರಕಾರ Bio-Diversity Circle ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಪ್ರದೇಶವನ್ನು ಉಪಯೋಗಿ ಸಂಸ್ಥೆಯವರಿಂದ ಪರಿಹಾರತ್ಮಕ ನೆಡುತೋಪು ಬೆಳೆಸಲು ಇಲಾಖೆಗೆ ಹಸ್ತಾಂತರಿಸಿಕೊಂಡಲ್ಲಿ ಅರಣ್ಯ ಪ್ರದೇಶವು ಹೆಚ್ಚಾಗುವುದರ ಜೊತೆಗೆ ವನ್ಯಜೀವಿಗಳ ಆವಾಸ-ಸ್ಥಾನ ವೃದ್ಧಿಸುವುದರ ಜೊತೆಗೆ ಸಂತಾನಭಿವೃದ್ಧಿ ಹೆಚ್ಚಾದಂತೆ ಆಗುತ್ತದೆ. ಪ್ರಸ್ತಾಪಿತ ಮಾಲ್ಕಿ ಪ್ರದೇಶವನ್ನು ಹಸ್ತಾಂತರಿಸಿಕೊಳ್ಳುವ ಮುನ್ನ ಜಂಟಿ ಮೋಜಣಿ (ಕಂದಾಯ ಮತ್ತು ಅರಣ್ಯ ಇಲಾಖೆ) ಮೂಲಕ ಹಸ್ತಾಂತರಿಸಿಕೊಳ್ಳಲಾಗುವುದು, ಎಂಬ ವಿಷಯವನ್ನು ತಮಗೆ ಅಭಿನಂದನೆಗಳೊಂದಿಗೆ ಕಳುಹಿಸಿದೆ.

**ಅಡಕ: ಉಲ್ಲೇಖ- 2 ರ ಪತ್ರದಲ್ಲಿ ತಿಳಿಸಿದಂತೆ ಯೋಗ್ಯತಾ ಪ್ರಮಾಣ ಪತ್ರ, (Format-A), KML File CD, CA Identified area Maps ಹಾಗೂ CA Scheme**

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ, ಬೆಳಗಾವಿ.